**2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು**

| | |
|---|---|
| **ಎಸ್ ಸಿ :** | 231/2022 |

| | | |
|---|---|---|
| ಸಾಕ್ಷಿದಾರರ ಹೆಸರು | ಶಶಿಕುಮಾರ್ | |
| ಗಂಡನ ಹೆಸರು | ಮಹದೇವಪ್ಪ | ಸಾಕ್ಷಿಗೆ ದಿಃ 13.02.2023 ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 31 ವರ್ಷ | |
| ಉದ್ಯೋಗ | Electrician | ಪಿ.ಡಬ್ಲ್ಯೂ-09 |
| ವಾಸ ಸ್ಥಳ | ಮೈಸೂರು | ಸಿ.ಡಬ್ಲ್ಯೂ-25 |

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ನಾನು 3 ನೇ ಆರೋಪಿಯನ್ನು ನೋಡಿರುತ್ತೇನೆ . ಉಳಿದ ಆರೋಪಿತರನ್ನು ನೋಡಿರುವುದಿಲ್ಲ. ದಿಃ 06.10.2021 ರಂದು ಮದ್ಯಾಹ್ನ 2.30 ಗಂಟೆಗೆ ನನಗೆ ಮತ್ತು ಚಾಸಾ.26 ಪ್ರಸನ್ನ, ಈವರಿಗೆ ಪೊಲೀಸ್ ಇನ್ಸಪೆಕ್ಟರ್ ರವರು ಠಾಣೆಗೆ ಮಹಜರ್ ಗಾಗಿ ಕರೆಯಿಸಿದರು. ನಂತರ ಜೀಪಿನಲ್ಲಿ ನಾನು, ಪ್ರಸನ್ನ, 3 ನೇ ಆರೋಪಿ ಸಿದ್ದರಾಜು ಹಾಗೂ ಪೊಲೀಸ್ ಇನ್ಸಪೆಕ್ಟರ್ ಹೆಬ್ಬಾಳ್ 1 ನೇ ಹಂತ 2 ನೇ ಕ್ರಾಸ್, ಮನೆ ನಂಬರ್ 877 ಮನೆಗೆ ಸಿದ್ದರಾಜುರವರು ಕರೆದುಕೊಂಡು ಹೋಗಿ 2 ನೇ ಅಂತಸ್ಥಿನಲ್ಲಿ, ಸಿದ್ದರಾಜು ಈವರ ಅಜ್ಜಿ ವಾಸವಾಗಿದ್ದರು, ಸದರಿ ಕೋಣೆಗೆ ಕರೆದುಕೊಂಡು ಹೋಗಿ ಕೋಣೆಯ ಕಿಟಕಿ ಹಾಗೂ ಗ್ಲಾಸ್ ಒಡೆದು ಹಾಕಿ ಕೊಣೆಯ ಬಾಗಿಲನ್ನು ಲಾಕ್ ಮಾಡಿ ಡೋರ್ ಲಾಕ್ ಕೀ ಅನ್ನು ಕಿಟಕಿ ಮುಖಾಂತರ ಗ್ರಾಸ್ ಅನ್ನು ಒಡೆದು ಒಳಗೆ ಹಾಕಿರುವುದನ್ನು ಒಪ್ಪಿಕೊಂಡು ತೋರಿಸಿರುತ್ತಾನೆ. ನಂತರ ನಮಗೆ ಮೊದಲನೇ ಅಂತಸ್ಥಿಗೆ ಕರೆದುಕೊಂಡು ಹೋಗಿ ಅಲ್ಲಿ ಅವರ ಅಜ್ಜಿಯನ್ನು ಹೊಡೆಯಲು ಹಾಲ್ ನಲ್ಲಿ ಕುಳಿತು ಮೊಮ್ಮಕ್ಕಳು ಮತ್ತು ಸೊಸೆ ಪ್ಲಾನ್ ಮಾಡಿದ್ದೇವೆ ಎಂದು ಹೇಳುತ್ತಾರೆ. ಪೊಲೀಸರು ದಿಃ 06.10.2021 ಮದ್ಯಾಹ್ನ 2.30 ರಿಂದ 3.30 ಗಂಟೆಯವರೆಗೆ ಮಹಜರ್ ಮಾಡಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಮಹಜರ್ ಅನ್ನು ನಿ.ಪಿ-17 ಎಂದು ಹಾಗೂ ಅದರ

ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-17(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯಕ್ಕೆ ಛಾಯಚಿತ್ರಗಳನ್ನು ತೆಗೆದಿರುತ್ತಾರೆ ಎಂದು ಫೋಟೋಗಳನ್ನು ಗುರುತಿಸಿದ್ದು ಅವುಗಳನ್ನು ನಿ.ಪಿ -18 ಮತ್ತು 19 ಎಂದು ಗುರುತಿಸಲಾಯಿತು.

**ಪಾಟೀಸವಾಲು :- ಆರೋಪಿತರ ಪರ ವಕೀಲರಾದ ಎನ್.ಎನ್. ಆರ್ ರವರಿಂದಃ-**

ನಾನು SSLC ಮುಗಿಸಿದ ನಂತರ ಐ.ಟಿ.ಐ (fitter) ಮಾಡಿರುತ್ತೇನೆ. ನಾನು ಬಿ.ಎಮ್. ಶ್ರೀಕಂಠಯ್ಯ ನಗರ ಮೈಸೂರಿನಲ್ಲಿ ವಾಸವಾಗಿರುತ್ತೇನೆ. ಚಾಸಾ-26 ನನಗೆ ಸ್ನೇಹಿತ ಎಂದರೆ ಸರಿಯಲ್ಲ. ಫಿರ್ಯಾದಿಯ ಮಗ ಪ್ರಸನ್ನ ನನಗೆ ಸ್ನೇಹಿತ ಎಂದರೆ ಸರಿಯಲ್ಲ. ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು electrician ಕೆಲಸ ಮಾಡುತ್ತೇನೆ, ಹೆಬ್ಬಾಳ ಹತ್ತಿರ ಟೀ ಕುಡಿಯಲು ಹೋದಾಗ ಪೊಲೀಸರು ಮಹಜರ್ ಗೆ ಕರೆದಿದ್ದರು. ಪೊಲೀಸರು ನಮಗೆ ಮದ್ಯಾಹ್ನ 2 ಗಂಟೆಗೆ ನಮಗೆ ಕರೆದಿದ್ದರು. ಪೊಲೀಸರು ನಮಗೆ ಮಹಜರ್ ಗೆ ಬರಲು ನೋಟೀಸ್ ಕೊಟ್ಟಿದ್ದರು, ಪೊಲೀಸರು ನೋಟೀಸ್ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ನಾನು, ಚಾಸಾ-26 ಪ್ರಸನ್ನ ಆರೋಪಿ ಸಿದ್ದರಾಜು ಪೊಲೀಸ್ ಇನ್ಸಪೆಕ್ಟರ್ ಅವರ ಜೊತೆ ಇಬ್ಬರು ಪೊಲೀಸರು ಇದ್ದರು. ಪೊಲೀಸ್ ಇನ್ಸಪೆಕ್ಟರ್ ರವರ ಹೆಸರು ವಿಳಾಸ ನನಗೆ ಗೊತ್ತಿಲ್ಲ. ಮಹಜರ್ ಅನ್ನು ಪೊಲೀಸರು ಬರೆದಿರುತ್ತಾರೆ. ಪೊಲೀಸರು ಕೇಸಿನ ವಿಚಾರವನ್ನು ನಮಗೆ 2 ಗಂಟೆಗೆ ಹೇಳಿದರು. ಪೊಲೀಸರು ಕೇಸಿನ ವಿಚಾರವನ್ನು 10 ನಿಮಿಷದಲ್ಲಿ ಹೇಳಿರುತ್ತಾರೆ. ಪಂಚನಾಮೆಯನ್ನು ಬರೆಯಲು 2.30 ಗೆ ಪ್ರಾರಂಭ ಮಾಡಿ 3.30 ಗೆ ಮುಗಿಸಿರುತ್ತಾರೆ. ಆರೋಪಿ ಸಿದ್ದರಾಜು ನಮ್ಮನ್ನು ಕರೆದುಕೊಂಡು ಹೋಗಿರುತ್ತಾನೆ. ಪೊಲೀಸರು ನಮಗೆ ಠಾಣೆಗೆ ಕರೆಯಿಸಿದರು ನಂತರ ಜೀಪಿನಲ್ಲಿ ಹೋಗಿರುತ್ತೇನೆ. ಪೊಲೀಸ್ ಜೀಪಿನ ನಂಬರ್ ನನಗೆ ಗೊತ್ತಿಲ್ಲ. ಪೊಲೀಸರು ಬಿಳಿ ಹಾಳೆಯ ಮೇಲೆ ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. 3 ನೇ ಆರೋಪಿ ಕರೆದುಕೊಂಡು ಹೋದ ಮನೆಯ ಪೈಂಟಿಂಗ್ ನ ಬಣ್ಣ ನನಗೆ ಗೊತ್ತಿಲ್ಲ. ಮನೆಯ ಮುಖ್ಯದ್ವಾರ ಯಾವ ದಿಕ್ಕಿಗೆ ಇತ್ತು ಎಂದು ನನಗೆ ಗೊತ್ತಿಲ್ಲ. ಮನೆಯ measurement ನನಗೆ ಗೊತ್ತಿಲ್ಲ. ಮನೆಯ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಮೇಲಿನ ಅಂತಸ್ಥಿಗೆ ಹೋಗುವ ಮೆಟ್ಟಿಲುಗಳು ಯಾವ ದಿಕ್ಕಿಗೆ ಎಂದು ನನಗೆ ಗೊತ್ತಿಲ್ಲ. ಮೃತಳು

ವಾಸವಾಗಿದ್ದ ಕೋಣೆಯ ಯಾವ ದಿಕ್ಕಿಗೆ ಶೌಚಾಲಯವಿತ್ತು ಎಂದರೆ ಸಾಕ್ಷಿ ನನಗೆ ದಿಕ್ಕು ಗೊತ್ತಿಲ್ಲ ಎಂದು ಹೇಳುತ್ತಾರೆ. ಮನೆಯ ಕಿಟಕಿ ಬಾಗಿಲ ಪಕ್ಕದಲ್ಲಿ ಇತ್ತು. ಆದರೆ ನನಗೆ ದಿಕ್ಕು ಗೊತ್ತಾಗುವುದಿಲ್ಲ. ಕಿಟಕಿಯ ಗ್ಲಾಸ್‌ಗಳು ಹೊರಗಿನಿಂದ ನೋಡಿದರೆ ಒಳಗಿನದು ಕಾಣುತ್ತಿರಲಿಲ್ಲ, ಒಳಗಿನಿಂದ ನೋಡಿದರೆ ಹೊರಗಿನದು ಕಾಣುತ್ತಿತ್ತು. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಿಟಕಿಯ ಅಗಲ ಹಾಗೂ ಉದ್ದ ನನಗೆ ಗೊತ್ತಿಲ್ಲ. ಬಾಗಿಲು ಒಳಗಿನಿಂದ ಕೀಲಿ ಹಾಕಿದ್ದು ಇತ್ತು. ನಾನು 3 ನೇ ಆರೋಪಿ ಸಿದ್ದರಾಜು ಈತನನ್ನು ನೋಡಿಲ್ಲ ಎಂದರೆ ಸರಿಯಲ್ಲ. ನಾವು ಅ ದಿನ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿ ಸಿದ್ದರಾಜು ನಮಗೆ ಸ್ಥಳ ತೋರಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಮುಂದೆ ಮಹಜರು ಬರೆದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು